**ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ-2**

ಸಂಖ್ಯೆ: ಸಿ2/ಸಶಿಅ/ಡಾ.ಸೆ.ಅ.ಸೇ/58/2010-11 ದಿನಾಂಕ: 10/6/2011

**ಕೊಟೇಷನ್ ಆಹ್ವಾನ**

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು-2 ಈ ಕಚೇರಿಯಲ್ಲಿ ಹಾಗೂ ಅಧೀನದ 5 ಕ್ಷೇತ್ರ ಸಂಪನ್ಮೂಲ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ಡಾಟಾ ಎಂಟ್ರಿ ಆಪರೇಟರ್‌ಗಳು, ಭದ್ರತಾ ಕಾವಲುಗಾರರು ಮತ್ತು ಗ್ರೂಪ್-ಡಿ ನೌಕರರ ಸೇವೆಯನ್ನು ಜುಲೈ-2011 ರಿಂದ 2012ರ ಜೂನ್ ಅಂತ್ಯದವರೆಗೆ ಒದಗಿಸುವ ಬಗ್ಗೆ ಅರ್ಹ ಸಂಸ್ಥೆಗಳಿಂದ ಕೊಟೇಷನ್ ಆಹ್ವಾನಿಸಿದೆ. ಈ ಬಗ್ಗೆ ಹೆಚ್ಚಿನ ವಿವರವನ್ನು ಈ ಕಚೇರಿಯಿಂದ ಹಾಗೂ ವೆಬ್‌ಸೈಟ್ www.schooleducation.kar.nic.in ಮತ್ತು ssakarnataka.nic.in ಯಿಂದ ಪಡೆಯಬಹುದಾಗಿದೆ.

ಕೊಟೇಷನ್‌ಗಳನ್ನು ದಿನಾಂಕ: 22/6/2011ರಂದು ಸಂಜೆ 5.00 ಗಂಟೆಯೊಳಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸಬೇಕು. ಲಕೋಟೆಯ ಮೇಲೆ "ಮಾನವ ಸಂಪನ್ಮೂಲಗಳನ್ನು ಒದಗಿಸಲು ಲಕೋಟೆ" ಎಂದು ಬರೆದಿರಬೇಕು.

ಸಹಿ/-
ಉಪನಿರ್ದೇಶಕರು ಹಾಗೂ ಪದನಿಮಿತ್ತ,
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂ–2

ಸಂಖ್ಯೆ: ಸಿ2/ಸಶಿಅ/ಡಾ.ಸೆ.ಅ.ಸೇ/58/2010–11

ದಿನಾಂಕ: 10/6/2011

## ಕೊಟೇಷನ್ ಆಹ್ವಾನ

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು–2 ಈ ಕಚೇರಿಯಲ್ಲಿ ಹಾಗೂ ಅಧೀನದ 5 ಕ್ಷೇತ್ರ ಸಂಪನ್ಮೂಲ ಕಚೇರಿಗಳಲ್ಲಿ ಜುಲೈ–2011 ರಿಂದ 2012ರ ಜೂನ್ ಅಂತ್ಯದವರೆಗೆ ಡಾಟಾ ಎಂಟ್ರಿ ಆಪರೇಟರ್‌ಗಳು, ಭದ್ರತಾ ಕಾವಲುಗಾರರು ಮತ್ತು ಗ್ರೂಪ್–ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸುವ ಬಗ್ಗೆ ಅಂಗೀಕೃತ ಸಂಸ್ಥೆಗಳಿಂದ ಕೊಟೇಷನ್ ಆಹ್ವಾನಿಸಿದೆ.

| ಕ್ರ.ಸಂ | ಸಂಪನ್ಮೂಲ | ಇರಬೇಕಾದ ವಿದ್ಯಾರ್ಹತೆ | ಅನುಭವ | ಬೇಕಾಗಿರುವ ನೌಕರರ ಸಂಖ್ಯೆ |
|---|---|---|---|---|
| 1 | ಡಾಟಾ ಎಂಟ್ರಿ ಆಪರೇಟರ್ | ಪಿ.ಯು.ಸಿ ಮತ್ತು 2 ವರ್ಷದ ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸ್ | 2 ವರ್ಷಗಳು | 7 |
| 2 | ಸೆಕ್ಯೂರಿಟಿ | ಏಳನೇ ತರಗತಿ ಉತ್ತೀರ್ಣರಾಗಿದ್ದು, ದೃಢಕಾಯ ಶರೀರವನ್ನು ಹೊಂದಿರಬೇಕು | 1 ವರ್ಷ | 6 |
| 3 | ಗ್ರೂಪ್ ಡಿ | ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು | 1 ವರ್ಷ | 1 |

ಕಾರ್ಯಾದೇಶ ಪಡೆದುಕೊಂಡ ಸಂಸ್ಥೆಯು ಮಾನವ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಮೇಲಿನ ಅವಧಿಗೆ ಸತತವಾಗಿ ಈ ಕಛೇರಿಗೆ ಒದಗಿಸಬೇಕು. ಸಂಸ್ಥೆಯು ಒದಗಿಸುವ ಮಾನವ ಸೇವೆಗೆ ತಗಲುವ ಇ.ಎಸ್.ಐ. ಪಿ.ಎಫ್ ಇತ್ಯಾದಿ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು, ನಿಯಮಾನುಸಾರ ಇವನ್ನು ಸಂಸ್ಥೆಯೇ ಭರಿಸಬೇಕು ಮತ್ತು ಸಂಸ್ಥೆಯು ಸೂಚಿಸುವ ದರಗಳು ಈ ಎಲ್ಲಾ ವೆಚ್ಚವನ್ನು ಒಳಗೊಂಡಿರಬೇಕು.
ಆಸಕ್ತ ಸಂಸ್ಥೆಗಳು ಈ ಕೆಳಗಿನ ನಮೂನೆಯಲ್ಲಿ ಪ್ರತಿ ತಿಂಗಳಿಗೆ ತಗಲುವ ದರ ಪಟ್ಟಿಯನ್ನು ಸಲ್ಲಿಸಬೇಕು.

| ಕ್ರ.ಸಂ | ಸಂಪನ್ಮೂಲ | ನಿಗದಿಪಡಿಸಿರುವ ಕನಿಷ್ಠ ಸಂಭಾವನೆ | ಪ್ರತಿ ನೌಕರನಿಗೆ ನೀಡುವ ಮಾಸಿಕ ಸಂಭಾವನೆ | ತೆರಿಗೆ+ಸೇವಾ ಶುಲ್ಕ+ಇತರೆ ಸೌಲಭ್ಯಗಳು(ಪಿ.ಎಫ್, ಇ.ಎಸ್.ಐ ಇತ್ಯಾದಿ) | ಒಟ್ಟು ಮೊತ್ತ |
|---|---|---|---|---|---|
| 1 | ಡಾಟಾ ಎಂಟ್ರಿ ಆಪರೇಟರ್ | 7000 | | | |
| 2 | ಸೆಕ್ಯೂರಿಟಿ | 4000 | | | |
| 3 | ಗ್ರೂಪ್ ಡಿ | 4000 | | | |

ಮೇಲ್ಕಂಡಂತೆ ನಮೂದಿಸಿರುವ ಕನಿಷ್ಠ ಮಾಸಿಕ ಟೇಕ್ ಹೋಮ್ ಸಂಭಾವನೆಯನ್ನು ಆಧಾರವಗಿಟ್ಟುಕೊಂಡು ತಮ್ಮ ದರವನ್ನು ನಮೂದಿಸತಕ್ಕದ್ದು, ಎಲ್ಲಾ ವರ್ಗದ ನೌಕರರುಗಳಿಗೆ ಸಂಬಂಧಿಸಿದಂತೆ, ಒಟ್ಟಾರೆ ಪರಿಗಣಿಸಿದಾಗ ಅತಿ ಕಡಿಮೆ ಮೊತ್ತವನ್ನು (ನಿಗದಿಪಡಿಸಿರುವ ಕನಿಷ್ಠ ದರಕ್ಕಿಂತ ಹೆಚ್ಚಾಗಿರುವ) ನಮೂದಿಸುವ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗುವುದು. ಸಂಸ್ಥೆಯು ಒದಗಿಸುವ ನೌಕರರ ಸಂಖ್ಯೆಯನ್ನು ಸಂಸ್ಥೆ ಕೋರಿರುವ ದರಗಳಲ್ಲಿಯೇ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಈ ಕಛೇರಿಯು ಉಳಿಸಿಕೊಂಡಿರುತ್ತದೆ.

ಷರತ್ತುಗಳು:

1. ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರತಕ್ಕದ್ದು.
2. ಸಂಸ್ಥೆಯು ಸೇವಾ ತೆರಿಗೆ ಪಾವತಿಸಲು ಪಡೆದಿರುವ ನೋಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸುವುದು.
3. ಸಂಸ್ಥೆಯ ಆಡಿಟ್‌ಗೆ ಸಂಬಂಧಿಸಿದಂತೆ ಮೂರು ವರ್ಷದ ಆಡಿಟ್ ವರದಿಯನ್ನು ಸಲ್ಲಿಸುವುದು.
4. ಏಜೆನ್ಸಿಯಿಂದ ಒದಗಿಡಲ್ಪಟ್ಟ ಕೆಲಸಗಾರರಿಗೆ ಇಲಾಖೆ ವತಿಯಿಂದ ಯಾವುದೇ ನೇಮಕಾತಿ ಆದೇಶ ನೀಡಲಾಗುವುದಿಲ್ಲ.
5. ಬೆಂಗಳೂರು ದಕ್ಷಿಣ ಜಿಲ್ಲೆಯ ಡಿ.ಪಿ.ಒ ಕಛೇರಿ ಮತ್ತು ಬಿ.ಆರ್.ಸಿ ಕೇಂದ್ರಗಳಲ್ಲಿ ಭದ್ರತಾ ಕಾವಲುಗಾರರು ಪ್ರತಿ ನಿತ್ಯ ಸಂಜೆ 5.30 ಗಂಟೆಯಿಂದ ಮಾರನೆಯ ದಿನ ಬೆಳಿಗ್ಗೆ 9.30 ವರೆಗೆ ಕೆಲಸ ನಿರ್ವಹಿಸುವುದು. ಅಟೆಂಡರ್ ರವರು ಡಿ.ಪಿ.ಒ ಕಛೇರಿಯಲ್ಲಿ ಬೆಳಿಗ್ಗೆ 9.30 ರಿಂದ ಸಂಜೆ 6.00 ಗಂಟೆಯವರೆಗೆ ಕೆಲಸ ನಿರ್ವಹಿಸುವುದು. ಹೀಗೆ ಒದಗಿಸಿದ ಭದ್ರತಾ ಸಿಬ್ಬಂದಿಗಳು ಸದೃಢರಾಗಿದ್ದು, ನಿಷ್ಠೆ ಹಾಗೂ ಸಮರ್ಪಣಾ ಭಾವದಿಂದ ಕೆಲಸ ನಿರ್ವಹಿಸುವವರಾಗಿರತಕ್ಕದ್ದು.
6. ಭದ್ರತಾ ಸಿಬ್ಬಂದಿಯವರು ಸಮವಸ್ತ್ರ, ಷೂ, ಸಾಕ್ಸ್, ಲಾಠಿ ಮತ್ತು ವಿಷಲ್ ಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಸ್ಥೆಗಳಿಂದ ಒದಗಿಸಲ್ಪಟ್ಟ ಕೆಲಸಗಾರರಿಗೆ ಇಲಾಖೆಯಲ್ಲಿ ಖಾಯಂ ಅಥವಾ ಇತರೆ ಸೌಲಭ್ಯಗಳನ್ನು ಒದಗಿಸುವುದಿಲ್ಲ.
8. ಸಿಬ್ಬಂದಿ ವರ್ಗದವರಿಗೆ ಆಗುವ ಯಾವುದೇ ರೀತಿಯ ಹಾನಿಗೆ ಸಿಬ್ಬಂದಿಯ ಸೇವೆಯನ್ನು ಒದಗಿಸಿರುವ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.
9. ಸಿಬ್ಬಂದಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪವಿದ್ದಲ್ಲಿ ಪೂರ್ವ ಸೂಚನೆಯಿಲ್ಲದೇ ನೀಡಲಾದ ಆದೇಶವನ್ನು ರದ್ದುಪಡಿಸಲಾಗುವುದು.
10. ಸಂಸ್ಥೆಯವರು ಅನುಭವವುಳ್ಳ ಕೆಲಸಗಾರರನ್ನು ಒದಗಿಸುವುದು.
11. ಸದರಿ ಹುದ್ದೆಗಳು ತಾತ್ಕಾಲಿಕವಾಗಿರುತ್ತದೆ.
12. ಈ ಕಛೇರಿಯಲ್ಲಿ ವಿಧಿಸುವ ಷರತ್ತುಗಳು ಹಾಗು ತೀರ್ಮಾನವೇ ಅಂತಿಮವಾಗಿರುತ್ತದೆ.
13. ನೌಕರರಿಗೆ ಪ್ರಾವಿಡೆಂಟ್ ಫಂಡ್ ಮತ್ತು ಇಎಸ್‌ಐ ಸೌಲಭ್ಯವನ್ನು ಕಡ್ಡಾಯವಾಗಿ ಸಂಸ್ಥೆಯವರು ಒದಗಿಸುವುದು. ಈ ಬಗ್ಗೆ ಇಲಾಖೆಯು ಯಾವುದೇ ರೀತಿಯಲ್ಲಿ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
14. ಸಂಸ್ಥೆಯು ಹಾಲಿ ಯಾವ ಯಾವ ಸರ್ಕಾರಿ ಹಾಗು ಇತರೆ ಕಛೇರಿಗಳಲ್ಲಿ ಸೇವೆ ನೀಡುತ್ತಿರುತ್ತಾರೆ ಎಂಬುದಕ್ಕೆ ಮಾಹಿತಿ ಒದಗಿಸುವುದು.
15. ದರಪಟ್ಟಿಯಲ್ಲಿ ನೀಡಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ನೌಕರರ ಮಾಹೆಯಾನ ಸಂಭಾವನೆ, ಸರ್ವಿಸ್ ಚಾರ್ಜ್,ಸೇವಾ ತೆರಿಗೆ ಇವುಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.
16. ಸಿಬ್ಬಂದಿಯ ಕರ್ತವ್ಯ ಲೋಪ, ನಿರ್ಲಕ್ಷತೆ ಅಜಾಗರೂಕತೆಯಿಂದ ಇಲಾಖೆಗೆ ಆಗುವ ನಷ್ಟಕ್ಕೆ ಸಂಸ್ಥೆಯನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.ಸಂಸ್ಥೆಯು PAN ಸಂಖ್ಯೆಯನ್ನು ಕಡ್ಡಾಯವಾಗಿ ನೀಡತಕ್ಕದ್ದು.
17. ನಿಗದಿತ ನಮೂನೆಯಲ್ಲಿ ಬ್ಯಾಂಕ್ ಗ್ಯಾರೆಂಟಿಯನ್ನು ಕೊಟೇಷನ್‌ನಲ್ಲಿ ಯಶಸ್ವಿಯಾದ ಸಂಸ್ಥೆ ನೀಡತಕ್ಕದ್ದು.

ಕೊಟೇಷನ್‌ಗಳನ್ನು ದಿನಾಂಕ:22/6/2011 ರಂದು ಸಂಜೆ 5.00 ಗಂಟೆಯೊಳಗೆ ಮೊಹರಾದ ಲಕೋಟೆಯಲ್ಲಿ ಸಲ್ಲಿಸಬೇಕು. ಲಕೋಟೆಯ ಮೇಲೆ "ಮಾನವ ಸಂಪನ್ಮೂಲಗಳನ್ನು ಒದಗಿಸಲು ಲಕೋಟೆ" ಎಂದು ಬರೆದಿರಬೇಕು.

[illegible]
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ದಕ್ಷಿಣ ಜಿಲ್ಲೆ.